ಅ) ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯ ವತಿಯಿಂದ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಭಾಲ್ಕಿ ಮತ ಕ್ಷೇತ್ರದಲ್ಲಿ ಕಳೆದ ಎರಡೂವರೆ ವರ್ಷಗಳಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ; (ಅಭಿವೃದ್ಧಿ ಕಾರ್ಯಗಳ ಪೂರ್ಣ ವಿವರಗಳನ್ನು ಮತ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು)

ಆ) ಈ ಅಭಿವೃದ್ಧಿ ಕಾರ್ಯಗಳಿಗಾಗಿ ಜಿಲ್ಲೆಗೆ ಇಲ್ಲಿಯವರೆವಿಗೆ ವೆಚ್ಚ ಮಾಡಲಾಗಿರುವ ಹಣವೆಷ್ಟು;

ಇ) ಈ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣವಾಗಿದೆ ಮತ್ತು ಎಷ್ಟು ಅಪೂರ್ಣವಾಗಿವೆ;

ಈ) ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಹೊಸ ಕಾಮಗಾರಿಗಳನ್ನು ಇಲಾಖೆಯ ವತಿಯಿಂದ ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ; ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ; (ಮತ ಕ್ಷೇತ್ರವಾರು ಅಂಕಿ ಅಂಶಗಳನ್ನು ಒದಗಿಸುವುದು)?

ಶ್ರೀ ಜಿ. ಜನಾರ್ದನ ರೆಡ್ಡಿ ((ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು):

ಅ) ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯ ವತಿಯಿಂದ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಭಾಲ್ಕಿ ಮತ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿರುವುದಿಲ್ಲ.

ಆ) ಮೇಲ್ಕಂಡ ಉತ್ತರದೊಂದಿಗೆ ಉದ್ಭವಿಸುವುದಿಲ್ಲ.

ಇ) ಮೇಲ್ಕಂಡ ಉತ್ತರದೊಂದಿಗೆ ಉದ್ಭವಿಸುವುದಿಲ್ಲ.

ಈ) ಮೇಲ್ಕಂಡ ಉತ್ತರದೊಂದಿಗೆ ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲೆಯಲ್ಲಿ ವಸತಿ ಯೋಜನೆಗಳ ಅನುಷ್ಠಾನ

117 (185) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯವರು ಬೀದರ್ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ವಸತಿ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದಾರೆ; ಕಳೆದ ಎರಡೂವರೆ ವರ್ಷಗಳಲ್ಲಿ ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು; (ಮತಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಆ) ಜಿಲ್ಲೆಯಲ್ಲಿ ವಸತಿ ಯೋಜನೆಗಳ ಅನುಷ್ಠಾನಕ್ಕಾಗಿ ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು

ಇದಕ್ಕಾಗಿ ಭೂಮಿ ನೀಡಿದವರಿಗೆ ಯಾವ ದರದಲ್ಲಿ ಎಷ್ಟೆಷ್ಟು ಮೊತ್ತದ ಹಣವನ್ನು ನೀಡಲಾಗಿದೆ; (ಪೂರ್ಣ ವಿವರಗಳನ್ನು ಮತ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು)

ಇ) ಈ ವಸತಿ ಯೋಜನೆಗಳಿಂದ ಜಿಲ್ಲೆಯ ಎಷ್ಟು ಜನರಿಗೆ ಮನೆಗಳು ಮತ್ತು ನಿವೇಶನಗಳು ಈ ಅವಧಿಯಲ್ಲಿ ದೊರಕಿವೆ ಹಾಗೂ ಇನ್ನೂ ಎಷ್ಟು ಮನೆಗಳು ಹಾಗೂ ನಿವೇಶನಗಳು ದೊರೆಯಲಿವೆ ; (ಮತಕ್ಷೇತ್ರವಾರು ವಿವರಗಳನ್ನು ಒದಗಿಸುವುದು)?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಕರ್ನಾಟಕ ಗೃಹ ಮಂಡಳಿಯು ಬೀದರ್ ಜಿಲ್ಲೆಯಲ್ಲಿ ಕೈಗೊಂಡಿರುವ ವಸತಿ ಯೋಜನೆಗಳ ವಿವರ ಹಾಗೂ ಕಳೆದೆರಡು ವರ್ಷಗಳಲ್ಲಿ ಮಾಡಿರುವ ವೆಚ್ಚಗಳ ವಿವರ ಈ ಕೆಳಕಂಡಂತಿದೆ.

ಪ್ರದೇಶಗಳು	ವೆಚ್ಚ ಮಾಡಿರುವ ವಿವರ ರೂ.ಗಳಲ್ಲಿ
ಚಿಟ್ಟಾ	840.76 ಲಕ್ಷ
ಗುನ್ನಳ್ಳಿ	148.45 ಲಕ್ಷ
ಔರಾದ್	ಕಾಮಗಾರಿ ಪ್ರಾರಂಭಿಸಬೇಕಾಗಿರುತ್ತದೆ
ಹಳ್ಳದಕೇರಿ	605.78 ಲಕ್ಷ

ವಿವರಗಳು ಈ ಕೆಳಕಂಡಂತಿವೆ:

ಕ್ರಮ ಸಂಖ್ಯೆ	ಸ್ಥಳದ ಹೆಸರು	ವಿಸ್ತೀರ್ಣ ಎ–ಗುಂ	ದರ ಪ್ರತಿ ಎಕರೆಗೆ ರೂ.ಗಳಲ್ಲಿ	ಪಾವತಿಸಲಾದ ಒಟ್ಟು ಮೊತ್ತ ರೂ.ಗಳಲ್ಲಿ	ಖರೀದಿಸಿದ ವರ್ಷ
1	ಔರಾದ್ ಪಟ್ಟಣ	20–00	4,35,000	95,86,960	2006–07
2	ಚಿಟ್ಟಾ	103–13 20–09	6,50,000 6,50,000	01,42,16,049	2008–09
3	ಗುನ್ನಳ್ಳಿ	49–39	6,50,000	03,55,46,575	2007–08

ಇ) ಈ ವಸತಿ ಯೋಜನೆಗಳಲ್ಲಿ ಹಂಚಿಕೆಯ ವಿವರಗಳು ಈ ಕೆಳಕಂಡಂತಿವೆ:

1. **ಹಳ್ಳದಕೇರಿ:** 21 ಮನೆ, 203 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. 29 ನಿವೇಶನಗಳ ಹಂಚಿಕೆ ಬಗ್ಗೆ ತಕರಾರು ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ. 49 ಮೂಲೆ ನಿವೇಶನ ಮತ್ತು 04 ಮನೆಗಳು ವಿಲೇವಾರಿಗೆ ಬಾಕಿಯಿರುತ್ತವೆ.

2. **ಚಿಟ್ಟಾ:** ವಿವಿಧ ವರ್ಗದ 1659 ನಿವೇಶನಗಳನ್ನು ಹಾಗೂ 48 ಮನೆಗಳನ್ನು ನಿರ್ಮಿಸಲಾಗುತ್ತಿದೆ. ನಿರ್ಮಿಸಿದ ನಂತರ ಅವುಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುವುದು.

3. **ಗುನ್ನಳ್ಳಿ:** ವಿವಿಧ ವರ್ಗದ 711 ನಿವೇಶನಗಳನ್ನು ಹಾಗೂ 17 ಮನೆಗಳನ್ನು ನಿರ್ಮಿಸುವ ಕಾಮಗಾರಿಯು ಪ್ರಗತಿಯಲ್ಲಿದೆ, ನಿರ್ಮಿಸಿದ ನಂತರ ಅವುಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುವುದು.

4. **ಬಿರಾದ್:** ವಸತಿ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

ಪ್ರವಾಸಿ ಸ್ಥಳಗಳ ಅಭಿವೃದ್ಧಿ ಬಗ್ಗೆ

118 (187) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಇರುವ ಪ್ರವಾಸಿ ಸ್ಥಳಗಳು ಯಾವುವು; (ಪೂರ್ಣ ವಿವರಗಳನ್ನು ಮತಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು;

ಆ) ಈ ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಬರುವ ಪ್ರವಾಸಿಗರಿಗೆ ಜಿಲ್ಲೆಯಲ್ಲಿ ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ;

ಇ) ಕಳೆದ ಎರಡೂವರೆ ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಮತ್ತು ಇದಕ್ಕಾಗಿ ಈ ಅವಧಿಯಲ್ಲಿ ವೆಚ್ಚ ಮಾಡಲಾದ ಹಣವೆಷ್ಟು; (ಪೂರ್ಣ ವಿವರಗಳಗಳನ್ನು ಮತಕ್ಷೇತ್ರವಾರು ಅಂಕಿ-ಅಂಶಗಳಲ್ಲಿ ಒದಗಿಸುವುದು)?

ಶ್ರೀ ಜಿ. ಜನಾರ್ದನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು):